# ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ
## ಹೂವಿನಹಡಗಲಿ
## ಅಸಲು ದಾವಾ ನಂ ಃ 163/2014

**ಡಿ.ಡಬ್ಲ್ಯೂ ಃ 01**

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ ಃ 31-01-2020 ರಂದು ಸತ್ಯ ಪ್ರತಿಜ್ಞೆಯನ್ನು ಬೋದಿಸಲಾಯಿತು.

ಮುಖ್ಯ ವಿಚಾರಣೆ ಃ ಪ್ರತಿವಾದಿ ಪರ ಶ್ರೀ ಎಸ್ ಎಸ್ ಬಿ ವಕೀಲರಿಂದ ಃ

ನಾನು ಈ ದಾವೆಯಲ್ಲಿ ವಾದಿ ಆಗಿರುತ್ತೇನೆ. ನಾನು ನನ್ನ ಸಾಕ್ಷ್ಯ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿರುವ ಸಂಗತಿಗಳಲ್ಲೆವೂ ಸತ್ಯವಾಗಿರುತ್ತವೆ. ನನ್ನ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ.

ಪಾಲುಪಟ್ಟಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ-1 ಎಂದು, ಅದರಲ್ಲಿರುವ ನನ್ನ ತಂದೆಯ ಸಹಿಯನ್ನು ನಿಡಿ-1 (ಎ), ಅಣ್ಣನಾದ ಗುಡ್ಡಪ್ಪನ ಸಹಿಯನ್ನು ನಿಡಿ-1 (ಬಿ), ನನ್ನ ಸಹಿಯನ್ನು ನಿಡಿ-1 (ಸಿ), ನನ್ನ ತಂಗಿ ಅಕ್ಕಮ್ಮಳ ಸಹಿಯನ್ನು ನಿಡಿ-1 (ಡಿ)ಎಂದು, ನನ್ನ ತಮ್ಮನಾದ ನಾಗಪ್ಪನ ಸಹಿಯನ್ನು ನಿಡಿ-1 (ಇ) ಎಂದು, ಐದು ಜನ ಸಾಕ್ಷಿದಾರರ ಸಹಿಯನ್ನು ನಿಡಿ-1 (ಎಫ) ನಿಂದ ನಿಡಿ-1 (ಜೆ) ಎಂದು, ನನ್ನ ತಂದೆಯ ಮರಣ ಪ್ರಮಾಣಪತ್ರವನ್ನು ನಿಡಿ-2 ಎಂದು ಗುರ್ತಿಸಲಾಯಿತು.

ಆದ್ದರಿಂದ ಈ ದಾವೆಯಲ್ಲಿ ವಜಾ ಮಾಡಬೇಕೆಂದು ಪ್ರಾರ್ಥಿಸುತ್ತಿದ್ದೇನೆ.

ಈ ಹಂತದಲ್ಲಿ ವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಕೋರಿದ್ದರಿಂದ ಅನುಮತಿಯ ಮೇರೆಗೆ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ,

ಸಿವಿಲ್ ನ್ಯಾಯಾಧೀಶರು, ಹೂವಿನಹಡಗಲಿ.

ಎಸ್ ಎಸ್ ಜೆ
ಪ್ರ.ದ.ಸ.